# ಹಿರೇಕಲ್ಲು ಸಿದ್ಧರಬೆಟ್ಟ

## ಬಯಲುಸೀಮೆಯ ಸುಂದರ ಸಿದ್ಧವಿಹಾರ



ತುಮಕೂರು ಜಿಲ್ಲೆಯ ಹಿರೇಕಲ್ಲು ಸಿದ್ಧರಬೆಟ್ಟ ಚಾರಣದ ಜೊತೆಗೆ ಅರಿವಿನ ದಾರಿಯೂ ಹೌದು. ಬಯಲುಸೀಮೆಯ ಈ ಶ್ರದ್ಧಾಕೇಂದ್ರದ ಚಾರಣ, ಮೈಮನಗಳಲ್ಲಿ ಹೊಸ ಉತ್ಸಾಹವನ್ನೂ ವಿಚಾರದ ತರಂಗಗಳನ್ನೂ ದೊರಕಿಸಿಕೊಡಬಲ್ಲದು.

■ ಎಸ್‌. ನಟರಾಜ ಬೂದಾಳು

ಕೊರಟಗೆರೆ ಸಿದ್ಧರಬೆಟ್ಟ, ನಿಜಗಲ್ಲು ಸಿದ್ಧರಬೆಟ್ಟ, ಜೇನುಕಲ್ಲು ಸಿದ್ಧರಬೆಟ್ಟ, ಹಿರೇಕಲ್ಲು ಸಿದ್ಧರಬೆಟ್ಟ – ಇವೆಲ್ಲ ಕರ್ನಾಟಕದ ಬಯಲುಸೀಮೆಯ ಪ್ರಮುಖ ಶ್ರದ್ಧಾಕೇಂದ್ರಗಳು. ಇವು ಯಾವುವೂ ದೇವಸ್ಥಾನಗಳಿರುವ ಕೇಂದ್ರಗಳಲ್ಲ; ಬದಲಿಗೆ 'ಸಿದ್ಧರ ಗದ್ದುಗೆಗಳು'. ಈ ಸಿದ್ಧಪರಂಪರೆ ಭಾರತದ ನಿಜವಾದ ಆಧ್ಯಾತ್ಮಿಕ ಅಸ್ಮಿತೆ.

ಭಾರತದ ಧಾರ್ಮಿಕತೆಯ ಅಂತಃಸತ್ವವೆಂದರೆ ಚೌರಾಸೀ ಸಿದ್ಧಪರಂಪರೆ. ಈ ಪರಂಪರೆಯ ಪ್ರಮುಖ ಲಕ್ಷಣಗಳು ಇವು:

1. ಇಲ್ಲಿ ಗುಡಿಗಳಿಲ್ಲ; ಬದಲಿಗೆ ಬಯಲುಮಂಟಪಗಳೋ ಗವಿಗಳೋ ಇವೆ. ಇವೆಲ್ಲ ಅಲ್ಲಿ ಸಾಧಕರಾಗಿದ್ದು ಸುತ್ತಲಿನ ಜನರ ಅಜ್ಞಾನವನ್ನು ಕಳೆದು ಎಲ್ಲರೂ ಒಂದಾಗಿ ಬಾಳಲು ಅಗತ್ಯವಾದ ಮಾನಸಿಕ ಮತ್ತು ಸಾಮಾಜಿಕ ನೆಮ್ಮದಿಗೆ ಕಾರಣರಾಗಿದ್ದ ಸಿದ್ಧಸಾಧಕರ ಸಮಾಧಿ ಗದ್ದುಗೆಗಳು.
2. ಬಹುಪಾಲು ಎಲ್ಲವೂ ಗವಿಗಳು ಮತ್ತು ಬಯಲು ಮಂಟಪಗಳು.
3. ಎಲ್ಲ ಜಾತಿಗಳವರೂ 'ಮುಟ್ಟಿ' ಪೂಜಿಸಲು ಸಾಧ್ಯವಾಗುವ, ಪೂಜಾರಿಗಳಿಲ್ಲದ, ಅಸ್ಪೃಶ್ಯತೆಯ ಕಿಂಚಿತ್ತೂ ಆಚರಣೆಯಿಲ್ಲದ, ಯಾವ ಮನುಷ್ಯಜೀವಿಯನ್ನೂ ಹೊರಗೆ ನಿಲ್ಲಿಸದ ಮುಕ್ತ ಆವರಣಗಳು.
4. ಇಲ್ಲಿ ಆಹಾರ ತಾರತಮ್ಯವಿಲ್ಲ. ಇವತ್ತು ಏನನ್ನು ಉಂಡು ಬಂದಿರುವೆ? ಎಂದು ಯಾರು ಯಾರನ್ನೂ 'ಹೊರಗೆ ನಿಲ್ಲಿಸಿ' ಕೇಳುವುದಿಲ್ಲ. ಪಂಕ್ತಿಭೇದವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ.

ಲಕ್ಷಾಂತರ ಭಕ್ತರ ಆರಾಧ್ಯಗುರುಗಳಾಗಿರುವ ಈ ಸಿದ್ಧರುಗಳು ಯಾರೂ ತಮ್ಮ ಹೆಸರುಗಳನ್ನು ಉಳಿಸಿ ಹೋಗಿಲ್ಲ. ಇದು ಯಾವ ಸಿದ್ಧರ ಬೆಟ್ಟ? ಎಂದರೆ ಬರುವ ಉತ್ತರ ಒಂದೇ: ಸಿದ್ಧಪ್ಪನದು!

ಇವತ್ತಿಗೂ ಕರ್ನಾಟಕದ ಅತ್ಯಂತ ಹೆಚ್ಚು ಜನರು ಇಟ್ಟುಕೊಳ್ಳುವ ಸಿದ್ಧಪ್ಪ, ಸಿದ್ಧಯ್ಯ, ಸಿದ್ದೇಶ, ಸಿದ್ಧರಾಮಯ್ಯ, ಗುರುಸಿದ್ಧ, ಇತ್ಯಾದಿ ಹೆಸರುಗಳು ಬರುತ್ತಿರುವುದು ಇಲ್ಲಿಂದಲೇ. ಈ ಗದ್ದುಗೆಗಳಿಗೆ ನಡೆದುಕೊಳ್ಳುವ ಲಕ್ಷಾಂತರ ಜನರಿಗೆ ಈ ಸಿದ್ಧರ ಬಗೆಗೆ ಪ್ರೇಮಭರಿತ ಭಕ್ತಿ ಮಾತ್ರ ಇದೆ. ಒಂದು ವಿಶೇಷ ಇದೆ. ಇಲ್ಲಿಗೆ ಬರುವ ಎಲ್ಲರೂ ಸಿದ್ಧಪ್ಪ ತಮ್ಮ ಸಂಬಂಧಿಕನೆಂಬಂತೆ ಬರುತ್ತಾರೆ! ಇಂತಹ ಪ್ರಜಾಸತ್ತಾತ್ಮಕ ಶ್ರದ್ಧಾಕೇಂದ್ರಗಳ ತವರು ತುಮಕೂರು ಜಿಲ್ಲೆ. ಪಕ್ಕದ ಅರಸೀಕೆರೆ ತಾಲ್ಲೂಕಿನ ಎರಡು ಪ್ರಮುಖ ಸಿದ್ಧರ ಬೆಟ್ಟಗಳಲ್ಲಿ ಒಂದಾದ ಹಿರೇಕಲ್ಲು ಸಿದ್ಧರಬೆಟ್ಟವನ್ನು ಕುರಿತ ಕಿರುಪರಿಚಯದ ಲೇಖನ ಇದು.

ನಾನು ಕಂಡಂತೆ ಇಡೀ ಬಯಲುಸೀಮೆಯಲ್ಲಿ ಹಿಮಾಲಯದ ನಟ್ಟ ನಡುವಿನ ಬುದ್ಧವಿಹಾರವೇನೋ ಎನ್ನುವಷ್ಟು ಸುಂದರವಾಗಿ ದೂರಕ್ಕೆ ಕಾಣುವ ಅತ್ಯಂತ ಮನೋಹರವಾದ ಸಿದ್ಧಕೇಂದ್ರವೆಂದರೆ ಹಿರೇಕಲ್ಲು ಸಿದ್ಧರಬೆಟ್ಟ. ಎತ್ತರದ ಗಿರಿಸಾಲುಗಳನ್ನು ಕವಿದುಕೊಂಡಿರುವ ವನರಾಶಿಯ ನಡುವೆ ಬೃಹತ್ ಬಂಡೆಯೊಂದರ ತುದಿಗೆ ಇಟ್ಟಿರುವ ಪೇಟದಂತಿರುವ ಒಂದು ಪುಟ್ಟ ಗೋಪುರ. ದೂರಕ್ಕೆ ಅದೊಂದು ಮೊನಾಸ್ಟ್ರಿ ಇರಬೇಕು ಎನ್ನುವಂತೆ ಭಾಸವಾಗುತ್ತದೆ. ಅರಸೀಕೆರೆಯಿಂದ ಹುಳಿಯಾರು ಕಡೆಗೆ ಹೋಗುವ ದಾರಿಯಲ್ಲಿ ಹತ್ತು ಕಿಲೋಮೀಟರು ಹೋದಮೇಲೆ ಬೆಟ್ಟಸಾಲಿನ ನಡುವೆ ಬಿಳಿಚುಕ್ಕೆಯೊಂದು ಗೋಚರಿಸುತ್ತದೆ. ಅಲ್ಲಿಂದ ಮೂರು ಕಿಲೋಮೀಟರು ಕಾಡಿನೊಳಕ್ಕೆ ಹೋಗುವ ಮಣ್ಣುದಾರಿ ಇದೆ. ಮೊದಲಿಗೆ ಇಲ್ಲಿಂದಲೇ ನಡೆದುಹೋಗಬೇಕಿತ್ತು. ಈಗ ವಾಹನಗಳು ಹೋಗಬಹುದು. ವಾಹನಗಳನ್ನು ನಿಲ್ಲಿಸಿ ಸುಮಾರು 2.5 ಕಿಲೋಮೀಟರುಗಳಷ್ಟು ದೂರ ಕುರುಚಲು ಕಾಡಿನ ನಡುವೆ ಚಾರಣ ಮಾಡಿ ಸಿದ್ಧರ ಗುಡಿಗೆ ತಲುಪಬೇಕು. ಒಂದು ಪುಟ್ಟ ಬೆಟ್ಟವನ್ನು ಹತ್ತಿ ಇಳಿದ ನಂತರ ಮಜ್ಜಿಗೆ ಹಳ್ಳ ಎಂಬ ಮಳೆಗಾಲದಲ್ಲಿ ಮಾತ್ರ ಹರಿಯುವ ಹಳ್ಳ ಸಿಗುತ್ತದೆ. ಅದನ್ನು ದಾಟಿದ ಮೇಲೆ ಮತ್ತೊಂದು ಬೆಟ್ಟದ ಚಾರಣ ಆರಂಭವಾಗುತ್ತದೆ. ಈಗಂತೂ ಬೆಟ್ಟದಲ್ಲಿರುವ ಜಾಲಾರಿ ಮರಗಳು ಹೂ ಬಿಟ್ಟಿವೆ. ಇಡೀ ಬೆಟ್ಟವೇ ಘಮ್ಮೆನ್ನುತ್ತಿದೆ! ಬಯಲುಸೀಮೆಯ ಕಾಡಿನ ವೈವಿಧ್ಯವನ್ನು ಕಾಣಲು ಈ ಕಾಡಿಗೆ ಬರಬೇಕು. ಇದೊಂದು ಅಪರೂಪದ ಸಸ್ಯಾವರಣ. ಈ ಪ್ರಾಂತದಲ್ಲಿ ಬೀಳುವ ಕಡಿಮೆ ಮಳೆಗೆ